13. ಶಬರಿ ಕೊನೆಗೆ ರಾಮನಿಂದ ಏನು ಬಯಸಿದಳು?

ಶಬರಿ ಕೊನೆಗೆ ರಾಮನಿಂದ ಮುಕ್ತಿ ಬಯಸಿದಳು.

14. 'ಬಲವಂದು' ಈ ಪದದ ಅರ್ಥವೇನು?

'ಬಲವಂದು' ಎಂದರೆ – ಪ್ರದಕ್ಷಿಣಾಕಾರವಾಗಿ (ಎಡದಿಂದ ಬಲಕ್ಕೆ) ಸುತ್ತುವುದು ಎಂದರ್ಥ.

15. ಸೀತೆಯನ್ನು ಯಾರು ರಕ್ಷಿಸಲಿ ಎಂದು ಶ್ರೀರಾಮನು ಹೇಳುತ್ತಾನೆ?

ಸೀತೆಯನ್ನು ಶಬರಿ ಪಂಚಭೂತಗಳಲ್ಲಿ ಬೆರೆಯುತ್ತ ರಕ್ಷಿಸಲಿ ಎಂದು ಶ್ರೀರಾಮನು ಹೇಳುತ್ತಾನೆ.

**ಈ ಕೆಳಗಿನ ಹೇಳಿಕೆಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ**. (**೩ ಅಂಕಗಳು**)

1. "ಆವುದೀ ಮರುಳು ನಮ್ಮೆಡೆಗೆ ಬರುತಿಹುದು"

**ಆಯ್ಕೆ** : ಈ ವಾಕ್ಯವನ್ನು "ಪು. ತಿ. ನರಸಿಂಹಾಚಾರ್" ಅವರು ರಚಿಸಿರುವ "ಶಬರಿ" ಗೀತನಾಟಕದಿಂದ ಆಯ್ದ "ಶಬರಿ" ಎಂಬ ಗದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ** : ಸೀತೆಯನ್ನು ಕಳೆದುಕೊಂಡು ದುಃಖಿತರಾಗಿ ಅವಳನ್ನು ಅರಸುತ್ತ ಹೊರಟ ರಾಮ ಲಕ್ಷ್ಮಣರು ದನುವಿನ ಹೇಳಿಕೆಯಂತೆ ಶಬರಿಯ ಆಶ್ರಮವನ್ನು ಪ್ರವೇಶಿಸಿದಾಗ ಅವರ ಎದುರಿಗೆ ಬನದಿಂದ ಆಶ್ರಮದೆಡೆಗೆ ಬರುತ್ತಿರುವ ವೃದ್ಧೆಯನ್ನು ನೋಡಿದ ಸಂದರ್ಭದಲ್ಲಿ ರಾಮನು ಲಕ್ಷ್ಮಣನಿಗೆ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ** : ಶಬರಿ ರಾಮನ ಬರುವಿಕೆಗಾಗಿಯೇ ಕಾದು ಕಾದು ವೃದ್ಧೆಯಾಗಿ ಮರುಳಳಂತೆ ಕಾಣುವುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಹೇಳಿದೆ.

2. "ನಾಚುತಿಹೆನೀ ಪೂಜ್ಯೆಯೀ ನಲುಮೆಯಿಂದ"

**ಆಯ್ಕೆ** : ಈ ವಾಕ್ಯವನ್ನು "ಪು. ತಿ. ನರಸಿಂಹಾಚಾರ್" ಅವರು ರಚಿಸಿರುವ "ಶಬರಿ" ಗೀತನಾಟಕದಿಂದ ಆಯ್ದ "ಶಬರಿ" ಎಂಬ ಗದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ** : ಶಬರಿಗೆ ರಾಮನಿಂದ ಸ್ವಲ್ಪವೂ ಉಪಾಕರವಿಲ್ಲದಿದ್ದರೂ ಸಹ ಅವಳು ಭಕ್ತಿಯಿಂದ, ಪ್ರೀತಿಯಿಂದ ನೆನೆಯುತ್ತ, ಹಂಬಲಿಸುತ್ತಿರುವುದನ್ನು ಕಂಡ ಸಂದರ್ಭದಲ್ಲಿ ರಾಮನು ಲಕ್ಷ್ಮಣನಿಗೆ ಈ ಮಾತನ್ನು ಹೇಳುತ್ತಾನೆ.

Vijayapur District Kannada Subject Forum

**ಸ್ವಾರಸ್ಯ** : ರಾಮನು ಶಬರಿಯ ನಿಷ್ಕಲ್ಮಶವಾದ ಭಕ್ತಿ, ಪ್ರೀತಿ ಹಾಗೂ ಹಂಬಲಿಸುವ ಪರಿಯನ್ನೂ, ಅವಳ ಅನುರಾಗವನ್ನೂ ಕಂಡು ನಾಚಿದೆನು ಎಂದು ಹೇಳುವುದು ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

3. "ತಾಯಿ, ದಾರಿಗರಿಗೆ ಬೀಡಿಲ್ಲಿ ದೊರೆಯುವುದೇ?"

**ಆಯ್ಕೆ** : ಈ ವಾಕ್ಯವನ್ನು "ಪು. ತಿ. ನರಸಿಂಹಾಚಾರ್" ಅವರು ರಚಿಸಿರುವ "ಶಬರಿ" ಗೀತನಾಟಕದಿಂದ ಆಯ್ದ "ಶಬರಿ" ಎಂಬ ಗದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ** : ರಾಮ ಲಕ್ಷ್ಮಣರು ಆಶ್ರಮವನ್ನು ಪ್ರವೇಶಿಸಿದ ಬಳಿಕ ರಾಮನಿಗಾಗಿ ಹಂಬಲಿಸುತ ಆತನ ಆದರಾತಿಥ್ಯಕ್ಕಾಗಿ ಸಿದ್ಧತೆಯಲ್ಲಿರುವ ಶಬರಿಯನ್ನು ಕಂಡ ಸಂದರ್ಭದಲ್ಲಿ ರಾಮನು ಶಬರಿಗೆ ಈ ರೀತಿ ಪ್ರಶ್ನಿಸುವನು.

